## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 813 (806)

**ಸದಸ್ಯರ ಹೆಸರು :** ಶ್ರೀ ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)

**ಉತ್ತರಿಸಬೇಕಾದ ದಿನಾಂಕ :** 19.08.2025

**ಉತ್ತರಿಸುವವರು :** ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಸರ್ಕಾರದ ಹಣದಿಂದ ನಿರ್ಮಿಸಿದ ಎಷ್ಟು ಶೌಚಾಲಯಗಳಿವೆ; ಕೋಟಿಗಟ್ಟಲೆ ಹಣ ವೆಚ್ಚ ಮಾಡಿ ನಗರಸಭೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ನಿರ್ಲಕ್ಷತನದಿಂದ ಶೌಚಾಲಯಗಳು ಬಳಕೆಯಾಗದೆ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಹಾಬಾದ ನಗರಸಭೆ ವ್ಯಾಪ್ತಿಯಲ್ಲಿ ಒಟ್ಟು 22 ಸಮುದಾಯ ಶೌಚಾಲಯಗಳು ಹಾಗೂ 01 ಸಾರ್ವಜನಿಕ ಶೌಚಾಲಯಗಳನ್ನು ಸರ್ಕಾರದ ಅನುದಾನದಡಿಯಲ್ಲಿ ನಿರ್ಮಿಸಲಾಗಿದೆ.<br><br>ಸದರಿ ಶೌಚಾಲಯಗಳ ಕಾರ್ಯನಿರ್ವಹಣೆಗೆ 4 ಭಾರಿ ವಾರ್ಷಿಕ ಟೆಂಡರ್‌ನ್ನು ಕರೆಯಲಾಗಿ, 3 ಕರೆಗಳಲ್ಲಿ ಯಾವ ಬಿಡ್ ದಾರರು ಭಾಗವಹಿಸಿರುವುದಿಲ್ಲ, 4ನೇ ಕರೆಯ ಟೆಂಡರ್ ನಲ್ಲಿ ಅರ್ಹ ಏಜೇನ್ಸಿದಾರರಾದ ಮೆ॥ ಜೀವನ್ ಜಾಗರಣ ಸೋಶಿಯಲ್ ವೇಲ್ ಫೇರ್ ಸೋಸೈಯಿಟಿ (ರಿ), ಕಲಬುರಗಿ ರವರಿಗೆ ವಾರ್ಷಿಕ ನಿರ್ವಹಣೆಗೆ ದಿನಾಂಕ: 01.08.2025 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.<br>ಟೆಂಡರ್ ಪ್ರಕ್ರಿಯೆ ವೇಳೆ ಒಟ್ಟು 10 ಸಮುದಾಯ ಶೌಚಾಲಯಗಳು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಪ್ರಸ್ತುತ ಎಲ್ಲಾ ಶೌಚಾಲಯಗಳು ಬಳಕೆಯಲ್ಲಿ ಇರುತ್ತವೆ. |
| ಆ) | ಶಹಾಬಾದ ಪಟ್ಟಣದ ನಗರಸಭೆ ಸರ್ಕಾರದ ಹಣದಿಂದ ನಿರ್ಮಿಸಿದ ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಜನರು ಬಯಲು ಶೌಚಾಲಯ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸಾರ್ವಜನಿಕರು ಬಯಲು ಶೌಚಮಾಡದಂತೆ ತಡೆಗಟ್ಟಲು, ಆರೋಗ್ಯ ನಿರೀಕ್ಷಕರುಗಳು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಿ ಮಾದರಿ SWM 2019 ರಂತೆ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಸರ್ಕಾರದ ಹಣದಿಂದ ನಿರ್ಮಾಣವಾದ ಶೌಚಾಲಯಗಳನ್ನು ಸಾರ್ವಜನಿಕರು ಬಳಸಲು ಬೇಕಾದ ನಿರ್ವಹಣೆ ಮತ್ತು ಜಾಗೃತಿ ಮೂಡಿಸಲು ಕ್ರಮಕೈಗೊಂಡಿದೆಯೇ; | ಸ್ವಚ್ಛ ಭಾರತ ಅಭಿಯಾನದಡಿ ನಗರಸಭೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಮನೋಭಾವ ಬೆಳಸುವ ಸಲುವಾಗಿ ನಮ್ಮ-ನಡೆ ಸ್ವಚ್ಛತೆ-ಕಡೆಗೆ ಎಂಬ ಕಾರ್ಯಕ್ರಮದಡಿ ಸಾರ್ವಜನಿಕವಾಗಿ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. |

| | | | |
|---|---|---|---|
| | | | ಪ್ರಸ್ತುತ ಘನತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಪ್ರತಿದಿನ ಸಾರ್ವಜನಿಕರಿಗೆ ಶೌಚಾಲಯಗಳ ಉಪಯೋಗದ ಕುರಿತು ಹಾಗೂ ಬೀದಿ ನಾಟಕ, ಜಾಥ ಕಾರ್ಯಕ್ರಮದ ಮೂಲಕ ಮತ್ತು ಸಭೆ ಸಮಾರಂಭಗಳಲ್ಲಿ ಶೌಚಾಲಯಗಳ ಬಳಕೆಯ ಕುರಿತು ಮಾಹಿತಿ ನೀಡಿ ಜಾಗೃತಿ ಮೂಡಿಸಲಾಗಿದೆ. |
| | ಈ) | ಸ್ವಚ್ಛ ಭಾರತ ಅಭಿಯಾನ ನಡೆಯುತ್ತಿರುವ ಸಂದರ್ಭದಲ್ಲಿ ಇನ್ನು ಬಯಲು ಶೌಚಾಲಯಕ್ಕೆ ಅವಕಾಶ ಮಾಡುತ್ತಿರುವುದರಿಂದ ಪಟ್ಟಣದ ಸ್ವಚ್ಛತೆ ಮತ್ತು ಜನರ ಆರೋಗ್ಯಕ್ಕೆ ಧಕ್ಕೆಯಾಗುವುದಿಲ್ಲವೆ: | ಸಾರ್ವಜನಿಕರು ಬಯಲು ಶೌಚ ಮಾಡದಂತೆ ಎಚ್ಚರವಹಿಸಲಾಗುತ್ತಿದೆ ಮತ್ತು ಸಾರ್ವಜನಿಕ/ಸಮುದಾಯ ಶೌಚಾಲಯಗಳ ಸಮರ್ಪಕ ನಿರ್ವಹಣೆಗೆ, ಕಾರ್ಯಾದೇಶದಲ್ಲಿ ಶೌಚಾಲಯಗಳನ್ನು ಸದಾ ಸ್ವಚ್ಛ, ಸುರಕ್ಷಿತ ಮತ್ತು ಬಳಕೆ ಯೋಗ್ಯ ಸ್ಥಿತಿಯಲ್ಲಿ ಇರಿಸಲು ಸೂಚನೆ ನೀಡಲಾಗಿದೆ. |
| | ಉ) | ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ ಸರ್ಕಾರದ ಹಣ ದುಂದು ವೆಚ್ಚವಾಗಿರುವುದಕ್ಕೆ ಶಹಾಬಾದ ಪಟ್ಟಣದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ? | ಶಹಾಬಾದ ಪಟ್ಟಣದ ಸಮುದಾಯ ಶೌಚಾಲಯಗಳ ನಿರ್ವಹಣೆಯ ವಿಷಯವಾಗಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕೆಲವು ಶೌಚಾಲಯಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಪ್ರಸ್ತುತ ಎಲ್ಲಾ ಶೌಚಾಲಯಗಳ ನಿರ್ವಹಣೆಗೆ ಕಾರ್ಯಾದೇಶ ನೀಡಲಾಗಿದ್ದು, ಅವು ಬಳಕೆಯಲ್ಲಿ ಇವೆ. ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡುವ ಕುರಿತು ಆರೋಗ್ಯ ನಿರೀಕ್ಷಕರು ನಿಯಮಿತವಾಗಿ ಮೇಲ್ವಿಚಾರಣೆ ನಡೆಸುತ್ತಿದ್ದು, ಮಾದರಿ ಘನತ್ಯಾಜ್ಯ ಉಪನಿಯಮ 2019ರ ಪ್ರಕಾರ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸಲಾಗುತ್ತಿದೆ.<br>ಸರ್ಕಾರದ ಹಣ ದುಂದು ವೆಚ್ಚದ ಬಗ್ಗೆ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ. |

ಇ-ಸಂಖ್ಯೆ: ನಅಇ 213 ಜಿಇಎಲ್ 2025 (ಇ)

( ರಹೀಂ ಖಾನ್ )
ಪೌರಾಡಳಿತ ಮತ್ತು ಹಜ್ ಸಚಿವರು